# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 828 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸಬೇಕಾದ ದಿನಾಂಕ | : | 23.07.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರೆ ಕಟ್ಟಡಗಳು ಎಷ್ಟು: (ಪ್ರಸ್ತುತ ಇರುವ, ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಹಿತ ಎಲ್ಲಾ ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರೆ ಕಟ್ಟಡಗಳ ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ವಾಣಿಜ್ಯ ಸಂಕೀರ್ಣಗಳು</td><td>03</td></tr>
<tr><td>2</td><td>ಮಾರುಕಟ್ಟೆ ಸಂಕೀರ್ಣಗಳು</td><td>05</td></tr>
<tr><td>3</td><td>ಮಾರುಕಟ್ಟೆ ಮತ್ತು ಇತರೆ ಕಟ್ಟಡಗಳು</td><td>23</td></tr>
<tr><td>4</td><td>ನಿರ್ಮಾಣ ಹಂತದಲ್ಲಿರುವ ವಾಣಿಜ್ಯ/ ಮಾರುಕಟ್ಟೆ ಸಂಕೀರ್ಣಗಳು<br>1. ಕಂಕನಾಡಿ ಮಾರುಕಟ್ಟೆ<br>2. ಸುರತ್ಕಲ್ ಮಾರುಕಟ್ಟೆ</td><td><br>01<br>01</td></tr>
</table>
</td></tr>
<tr><td>ಆ)</td><td>ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಎಲ್ಲಾ ಕಟ್ಟಡ ನಿರ್ಮಾಣಕ್ಕಾಗಿ ಹೂಡಿದ ಬಂಡಾವಳವೆಷ್ಟು; ಸರ್ಕಾರ/ಪಾಲಿಕೆಯ ಹೂಡಿಕೆ ಮೊತ್ತವೆಷ್ಟು; ಕಟ್ಟಡ ನಿರ್ಮಾಣಕ್ಕಾಗಿ ಯಾವ್ಯಾವ ಸಂಸ್ಥೆಗಳಿಂದ ಎಷ್ಟು ಸಾಲ ಮಾಡಲಾಗಿದೆ; ಈ ಸಾಲವನ್ನು ಕ್ಲಿಪ್ತ ಸಮಯದಲ್ಲಿ ಮರು ಪಾವತಿಸಲಾಗುತ್ತಿದೆಯೇ;<br>(ಕಟ್ಟಡವಾರು ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಮಾರುಕಟ್ಟೆ ಸಂಕೀರ್ಣಗಳ ನಿರ್ಮಾಣಕ್ಕೆ ಸಂಬಂಧಿಸಿದ ಹೂಡಿಕೆ ಮೊತ್ತದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ ಹಾಗೂ ಸದರಿ ಸಾಲದ ಮೊತ್ತವನ್ನು ಕ್ಲಿಪ್ತ ಸಮಯದಲ್ಲಿ ಮರು ಪಾವತಿಸಲಾಗುತ್ತಿದೆ.
<table>
<tr><td>ಅ)</td><td>ಕದ್ರಿ ಮಾರುಕಟ್ಟೆ:<br>ಹೂಡಿಕೆ ಮೊತ್ತ ರೂ.12.03 ಕೋಟಿ.<br>KUIDFC ಸಾಲ ರೂ. 8.61 ಕೋಟಿ.<br>ಪಾಲಿಕೆಯ ಹೂಡಿಕೆ ರೂ. 3.69 ಕೋಟಿ.</td></tr>
<tr><td>ಆ)</td><td>ಉರ್ವ ಮಾರುಕಟ್ಟೆ.<br>ಒಟ್ಟು ಹೂಡಿಕೆ ಮೊತ್ತ ರೂ.14.37 ಕೋಟಿ.<br>ಬ್ಯಾಂಕ್ ಸಾಲ ರೂ. 7.00 ಕೋಟಿ.</td></tr>
<tr><td>ಇ)</td><td>ಕಂಕನಾಡಿ ಮಾರುಕಟ್ಟೆ ಸಂಕೀರ್ಣ.<br>(ಕಾಮಗಾರಿಪ್ರಗತಿಯಲ್ಲಿದೆ)<br>ಹೂಡಿಕೆ ಮೊತ್ತ ರೂ. 41.05 ಕೋಟಿ.<br>KUIDFC ಸಾಲ ರೂ. 29.00 ಕೋಟಿ.<br>ಬ್ಯಾಂಕ್ ಸಾಲ ರೂ. 09.45 ಕೋಟಿ.<br>ಪಾಲಿಕೆ ನಿಧಿಯಿಂದ ರೂ. 03.05 ಕೋಟಿ.</td></tr>
<tr><td>ಈ)</td><td>ಸುರತ್ಕಲ್ ಮಾರುಕಟ್ಟೆ ಸಂಕೀರ್ಣ<br>ಹೂಡಿಕೆ ಮೊತ್ತ ರೂ. 82.00 ಕೋಟಿ.<br>SFC ಅನುದಾನ ರೂ. 51.00 ಕೋಟಿ.<br>ಪಾಲಿಕೆಯ ಹೂಡಿಕೆ ರೂ. 31.00 ಕೋಟಿ.</td></tr>
<tr><td>ಉ)</td><td>ಅಳಕೆ ಮಾರುಕಟ್ಟೆ<br>ಪಾಲಿಕೆಯ ನಿಧಿಯಿಂದ ಹೂಡಿಕೆ ಮೊತ್ತ ರೂ.1.40 ಕೋಟಿ.</td></tr>
<tr><td>ಊ)</td><td>ಬಿಜೈ ಮಾರುಕಟ್ಟೆ<br>ಪಾಲಿಕೆಯ ನಿಧಿಯಿಂದ ಹೂಡಿಕೆ ಮೊತ್ತ ರೂ.4.80ಕೋಟಿ</td></tr>
</table>
</td></tr>
</table>

<table>
<tr>
<td>ಇ)</td>
<td>ಈ ಕಟ್ಟಡಗಳಲ್ಲಿ ಏಲಂ /ಟೆಂಡರ್/ಹರಾಜು ಮಾಡಬೇಕಾದ ಕಟ್ಟಡ/ಅಂಗಡಿ/ಮಾರುಕಟ್ಟೆಗಳು ಎಷ್ಟು; ಎಲ್ಲಾ ಅಂಗಡಿ/ಮಾರುಕಟ್ಟೆಗಳನ್ನು ಕಾಲಕಾಲಕ್ಕೆ ಏಲಂ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು; (ವಿವರ ನೀಡುವುದು)</td>
<td>ಏಲಂ / ಟೆಂಡರ್ / ಹರಾಜು ಮಾಡಬೇಕಾದ ಕಟ್ಟಡ / ಅಂಗಡಿ / ಮಾರುಕಟ್ಟೆಗಳ ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಟೆಂಡರ್ ಕರೆಯಬೇಕಾದ ವಾಣಿಜ್ಯ ಸಂಕೀರ್ಣಗಳು</td><td>3 ಸಂಕೀರ್ಣಗಳು (101 ಅಂಗಡಿಗಳು )</td></tr>
<tr><td>2</td><td>ಟೆಂಡರು ಕರೆಯಬೇಕಾದ ಮಾರುಕಟ್ಟೆ ಮತ್ತು ಇತರೆ ಕಟ್ಟಡಗಳು</td><td>23 ಸಂಕೀರ್ಣಗಳು (704 ಅಂಗಡಿಗಳು)</td></tr>
<tr><td>3</td><td>ನಿರ್ಮಾಣ ಹಂತದಲ್ಲಿರುವ ವಾಣಿಜ್ಯ / ಮಾರುಕಟ್ಟೆ ಸಂಕೀರ್ಣಗಳು<br>1. ಕಂಕನಾಡಿ ಮಾರುಕಟ್ಟೆ<br>2. ಸುರತ್ಕಲ್ ಮಾರುಕಟ್ಟೆ</td><td>01<br>01</td></tr>
</table>
* 6 ಮಾರುಕಟ್ಟೆಗಳ 133 ಅಂಗಡಿಗಳನ್ನು ಹಾಗೂ 1 ಕಛೇರಿ ಕಟ್ಟಡದ 2 ಅಂಗಡಿಗಳನ್ನು ಹರಾಜು ಮಾಡಲಾಗಿದೆ. 127 ಅಂಗಡಿಗಳಿಗೆ ಈಗಾಗಲೇ ಟೆಂಡರ್ ಕರೆದಿದ್ದು ಬಿಡ್ಡುದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲು ಕ್ರಮವಹಿಸಲಾಗಿದೆ.<br><br>
* 3 ವಾಣಿಜ್ಯ ಸಂಕೀರ್ಣ, 23 ಮಾರುಕಟ್ಟೆ ಮತ್ತು ಇತರೆ ಕಟ್ಟಡಗಳ 704 ಅಂಗಡಿಗಳ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ.</td>
</tr>
<tr>
<td>ಈ)</td>
<td>ಈ ರೀತಿಯ ಕಟ್ಟಡಗಳನ್ನು ನಿರ್ಮಿಸಿ ಕಟ್ಟಡ ಪೂರ್ಣಗೊಂಡಿದ್ದರೂ ಉದ್ಘಾಟನೆಯಾಗದ ಕಟ್ಟಡಗಳೆಷ್ಟು; ಹಾಗೂ ಪೂರ್ಣ ಪ್ರಮಾಣದಲ್ಲಿ ಬಳಕೆಮಾಡಿದ ಕಟ್ಟಡಗಳೆಷ್ಟು; ಇದಕ್ಕೆ ಕಾರಣಗಳೇನು; ಕಟ್ಟಡ ಬಳಕೆಗೆ ತಡವಾಗುವಿಕೆ ಸದರಿ ಕಟ್ಟಡಕ್ಕೆ ಸಾಲ ಇತ್ಯಾದಿ ಮರುಪಾವತಿ ತಡವಾಗಿ ಪಾಲಿಕೆಗೆ ಹೆಚ್ಚುವರಿ ಹೊರೆಯಾಗುವುದಿಲ್ಲವೇ; (ವಿವರ ನೀಡುವುದು)</td>
<td>*ಕದ್ರಿ ಮಾರುಕಟ್ಟೆ ಕಟ್ಟಡವು ಉದ್ಘಾಟನೆಗೆ ಬಾಕಿ ಇರುತ್ತದೆ.<br>*ಬಿಡ್ಡುದಾರರು ಭಾಗವಹಿಸದೇ ಇರುವುದರಿಂದ ಉರ್ವ, ಕಾವೂರು ಮತ್ತು ಅಳಕೆ ಮಾರುಕಟ್ಟೆ ಸಂಕೀರ್ಣ ಕಟ್ಟಡಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಕಾವೂರು ಮತ್ತು ಅಳಕೆ ಮಾರುಕಟ್ಟೆಗಳನ್ನು ಪಾಲಿಕೆ ನಿಧಿಯಿಂದ ನಿರ್ಮಿಸಲಾಗಿದ್ದು, ಸಾಲವನ್ನು ಪಡೆದಿರುವುದಿಲ್ಲ ಹಾಗೂ ಉರ್ವ ಮಾರುಕಟ್ಟೆ ಕಟ್ಟಡಕ್ಕೆ ಪಡೆದ ಸಾಲವನ್ನು ವಾರ್ಷಿಕ ಕಂತುಗಳಲ್ಲಿ ಪಾವತಿಸಲಾಗುತ್ತಿದೆ.</td>
</tr>
<tr>
<td>ಉ)</td>
<td>ಹೊಸ ಕಟ್ಟಡಗಳನ್ನು ಕಟ್ಟಿದ್ದರೂ ಇಲಾಖೆಯ ಕಛೇರಿಗಳನ್ನು ಮಾರುಕಟ್ಟೆಗಳನ್ನು ಸ್ಥಳಾಂತರ ಮಾಡದಿರಲು ಕಾರಣವೇನು; (ವಿವರ ನೀಡುವುದು)</td>
<td>ಹೊಸ ಕಟ್ಟಡಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಮುಗಿದ ನಂತರದಲ್ಲಿ ಸ್ಥಳಾಂತರಿಸಲಾಗುತ್ತದೆ.</td>
</tr>
<tr>
<td>ಊ)</td>
<td>ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರೆ ಕಟ್ಟಡಗಳು ಈ ಎಲ್ಲಾ ಕಟ್ಟಡಗಳಲ್ಲಿ ಮಹಡಿವಾರು ಕೋಣೆಗಳ, ಅಂಗಡಿಗಳ ಬಾಡಿಗೆ/ಲೀಸ್ ಮೊತ್ತವನ್ನು /ಶುಲ್ಕವನ್ನು ಹೇಗೆ ನಿಗಧಿಪಡಿಸಲಾಗಿದೆ? (ಚಾಲ್ತಿ ನಿಯಮಗಳ ಸಹಿತ ವಿವರ ನೀಡುವುದು)</td>
<td>ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 301 ಜಿಇಎಲ್ 2017, ದಿನಾಂಕ: 19-07-2019 ರಲ್ಲಿ ನೀಡಿರುವ ಮಾನದಂಡಗಳನ್ನು ಅನುಸರಿಸಿ, ಟೆಂಡರ್ ನಿಯಮಗಳನ್ನು ಪಾಲಿಸಿ, ಮಹಡಿವಾರು ಬಾಡಿಗೆ ದರಗಳನ್ನು ನಿಗಧಿಗೊಳಿಸಲಾಗುತ್ತಿದ್ದು, ಅದರ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
</table>

**ಸಂಖ್ಯೆ: ನಅಇ 51 ಎಂಎಂಸಿ 2024 (ಇ)**

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

# ಅನುಬಂಧ-1

| | |
|---|---|
| ಅ) | **ಕದ್ರಿ ಮಾರುಕಟ್ಟೆ:**<br>ಹೂಡಿಕೆ ಮೊತ್ತ ರೂ. 12.03 ಕೋಟಿ.<br>KUIDFC ಸಾಲ ರೂ. 8.61 ಕೋಟಿ.<br>ಪಾಲಿಕೆಯ ಹೂಡಿಕೆ ರೂ. 3.69 ಕೋಟಿ. |
| ಆ) | **ಉರ್ವಾ ಮಾರುಕಟ್ಟೆ.**<br>ಒಟ್ಟು ಹೂಡಿಕೆ ಮೊತ್ತ ರೂ. 14.37 ಕೋಟಿ.<br>ಬ್ಯಾಂಕ್ ಸಾಲ ರೂ. 7.00 ಕೋಟಿ. |
| ಇ) | **ಕಂಕನವಾಡಿ ಮಾರುಕಟ್ಟೆ ಸಂಕೀರ್ಣ.**<br>(ಕಾಮಗಾರಿ ಪ್ರಗತಿಯಲ್ಲಿದೆ)<br>ಹೂಡಿಕೆ ಮೊತ್ತ ರೂ. 41. 05 ಕೋಟಿ.<br>KUIDFC ಸಾಲ ರೂ. 29. 00 ಕೋಟಿ.<br>ಬ್ಯಾಂಕ ಸಾಲ ರೂ. 09.45 ಕೋಟಿ.<br>ಪಾಲಿಕೆ ನಿಧಿಯಿಂದ ರೂ. 03.05 ಕೋಟಿ. |
| ಈ) | **ಸುರತ್ಕಲ್ ಮಾರುಕಟ್ಟೆ ಸಂಕೀರ್ಣ**<br>ಹೂಡಿಕೆ ಮೊತ್ತ ರೂ. 82.00 ಕೋಟಿ.<br>SFC ಅನುದಾನ ರೂ. 51.00 ಕೋಟಿ.<br>ಪಾಲಿಕೆಯ ಹೂಡಿಕೆ ರೂ. 31.00 ಕೋಟಿ. |
| ಉ) | **ಅಳಕೆ ಮಾರುಕಟ್ಟೆ .**<br>ಪಾಲಿಕೆಯ ನಿಧಿಯಿಂದ ಹೂಡಿಕೆ ಮೊತ್ತ ರೂ.1.40 ಕೋಟಿ. |
| ಊ) | **ಬಿಜೈ ಮಾರುಕಟ್ಟೆ**<br>ಪಾಲಿಕೆಯ ನಿಧಿಯಿಂದ ಹೂಡಿಕೆ ಮೊತ್ತ ರೂ.4.80 ಕೋಟಿ |

ಸಾಲವನ್ನು ಕ್ಲಿಪ್ತ ಸಮಯದಲ್ಲಿ ಪಾತಿಸಲಾಗುತ್ತಿದೆ.

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು